**ದಿನಾಂಕಃ 07/03/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಪಿರ್ಯಾದುದಾರರ ಪರ ಶ್ರೀ ಕೆ ಎನ್ ಡಿ ವಕೀಲರಿಂದಃ**

5. ನಿಪಿ–1 ಚೆಕ್ಕು ನನ್ನದು. ಹೆಮ್ಮಿಗೆ ಗ್ರಾಮದ ಅಣ್ಣಯ್ಯ ಶೆಟ್ಟಿರವರ ಮಗ ಕಾಳಶೆಟ್ಟಿ ಎಂದರೆ ನಾನೇ. ನಾನು ಹೆಮ್ಮಿಗೆ ಗ್ರಾಮದಲ್ಲಿ ವಾಸಿಸುತ್ತಿದ್ದೇನೆ ಎಂದರೆ ಸರಿ. ಈ ಪ್ರಕರಣ ದಾಖಲಿಸಿದ ನಂತರ ನ್ಯಾಯಾಲಯದಿಂದ ನನಗೆ ನೋಟೀಸು ಬಂದಿತ್ತು ಎಂದರೆ ಸರಿ. ಸದರಿ ನೋಟೀಸನ್ನು ನಾನೇ ಖುದ್ದಾಗಿ ಪಡೆದಿದ್ದೇನೆ ಎಂದರೆ ಸರಿ. ನ್ಯಾಯಾಲಯದಿಂದ ನೋಟೀಸು ಬಂದ ನಂತರ ನನ್ನ ಚಕ್ಕು ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಪೋಲೀಸರಿಗೆ ಮತ್ತು ಬ್ಯಾಂಕ್ ನವರಿಗೆ ದೂರು ಸಲ್ಲಿಸಿಲ್ಲ. ನಾನು ಪಿರ್ಯಾದುದಾರರಿಂದ ಸಾಲ ಪಡೆದು ನಿಪಿ–1 ಚಕ್ಕನ್ನು ನೀಡಿದ್ದರೂ ಸಹ ಅವರಿಗೆ ತೊಂದರೆ ನೀಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 11.04.2018 ರಂದು ನನ್ನ ಖಾತೆಯಲ್ಲಿ ಹಣ ಇತ್ತೋ ಇಲ್ಲವೋ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**